RNU AIR DHARWAD

# JULY 12, 2026

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

## ಮುಖ್ಯಾಂಶಗಳು

<><><>

- ಖ್ಯಾತ, ಬಹುಭಾಷೆಗಳ ಹಿನ್ನೆಲೆ ಗಾಯಕಿ, ಎಸ್. ಜಾನಕಿ ಮೈಸೂರಿನಲ್ಲಿ ನಿಧನ.
- ರಾಜ್ಯದ ಪೊಲೀಸ್ ಠಾಣೆಗಳಲ್ಲಿ, ಪ್ರತಿ ತಿಂಗಳ, ಎರಡನೇ ಭಾನುವಾರ, "ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸಿಬ್ಬಂದಿ, ದಿನ".
- ಖೇಲೋ ಇಂಡಿಯಾ; ಫಿಟ್ ಇಂಡಿಯಾ; ರಾಜ್ಯ ಮಟ್ಟದ, ಮಲ್ಲಕಂಬ ಸ್ಪರ್ಧೆ, ಬೆಂಗಳೂರಿನಲ್ಲಿ, ಇಂದು ಸಮಾರೋಪ.
- ಇಂದು, ವಿಶ್ವ, ಕಾಗದ ಕೈಚೀಲ ಬಳಕೆ, ಜನ ಜಾಗೃತಿ ದಿನ.

<><><>

## ಈಗ ವಾರ್ತೆಗಳ ವಿವರ

<><><>

ಖ್ಯಾತ ಬಹುಭಾಷೆಗಳ ಹಿನ್ನೆಲೆ ಗಾಯಕಿ, ಎಸ್. ಜಾನಕಿ ನಿನ್ನೆ ಸಂಜೆ 7.30ಕ್ಕೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ, ಹೃದಯ ಸ್ತಂಭನದಿಂದ ನಿಧನರಾದರು. ಅವರಿಗೆ 88 ವರ್ಷ ವಯಸ್ಸಾಗಿತ್ತು. ನಾಲ್ಕು ಬಾರಿ ರಾಷ್ಟ್ರ ಪ್ರಶಸ್ತಿಗೆ ಅವರು ಭಾಜನರಾಗಿದ್ದರು. ಗಾನಕೋಗಿಲೆ ಎಂದೇ ಬಿರುದು ಪಡೆದಿದ್ದ, ಸುಮಧುರ ಧ್ವನಿ, 'ಇನ್ನುಮುಂದೆ ಸಾರ್ವಜನಿಕವಾಗಿ ಹಾಡುವುದಿಲ್ಲ' ಎಂದು, ಘೋಷಿಸಿದ ತಮ್ಮ ನೆಚ್ಚಿನ ಸ್ಥಳ ಮೈಸೂರಿನಲ್ಲೇ ಸ್ಥಬ್ಧವಾಯಿತು. ಕಳೆದ 69 ವರ್ಷಗಳಿಂದ, 20 ಭಾಷೆಗಳಲ್ಲಿ, 48 ಸಾವಿರಕ್ಕೂ ಹೆಚ್ಚು ಹಾಡುಗಳನ್ನು, ಅವರು ಹಾಡಿದ್ದಾರೆ. ಮೂಲತಃ ಆಂಧ್ರಪ್ರದೇಶದ, ಗುಂಟೂರು ಜಿಲ್ಲೆಯ, ರೆಪೆಲ್ಲೆ ತಾಲೂಕು, ಪಲ್ಲಪಟ್ಟದವರು.

<><><>

ಮೈಸೂರಿನ ಮಹಾರಾಜ ಕಾಲೇಜ ಆವರಣದಲ್ಲಿ, ಈ ಬೆಳಗ್ಗೆ 7.30ಕ್ಕೆ ಎಸ್. ಜಾನಕಿ ಅವರ ಪಾರ್ಥಿವ ಶರೀರವನ್ನು, ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗುವುದು. ಮೈಸೂರಿನ ಬೋಗಾದಿ ಬಳಿಯ ತೋಟದ ಮನೆಯಲ್ಲಿ, ಇಂದು ಸಂಜೆ 4.30ಕ್ಕೆ, ಅಂತ್ಯಕ್ರಿಯೆ ನಡೆಯಲಿದೆ ಎಂದು, ಸಚಿವ ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

<><><>

ಸಕಲ ಸರ್ಕಾರಿ ಗೌರವಗಳೊಂದಿಗೆ, ಎಸ್. ಜಾನಕಿ ಅವರ, ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಹೇಳಿದ್ದಾರೆ.

<><><>

ಎಸ್. ಜಾನಕಿ ಅವರ ಹೆಸರಿನ ಸ್ಮಾರಕ ನಿರ್ಮಾಣಕ್ಕೆ, ಮೈಸೂರಿನಲ್ಲಿ ಉಚಿತವಾಗಿ ಭೂಮಿ ನೀಡುವುದಾಗಿ, ಜೆ.ಡಿ.ಎಸ್. ಕಾರ್ಯಾಧ್ಯಕ್ಷ ಸಾ.ರಾ. ಮಹೇಶ, ಪ್ರಕಟಿಸಿದ್ದಾರೆ. ಅನೇಕ ಗಣ್ಯರು ಶ್ರದ್ಧಾಸುಮನ ಸಮರ್ಪಿಸಿದ್ದಾರೆ.

<><><>

ಪ್ರತಿ ತಿಂಗಳ ಎರಡನೇ ಭಾನುವಾರ, "ಪರಿಶಿ ್ಟ ಜಾತಿ ಹಾಗೂ ಪರಿಶಿ ್ಟ ಪಂಗಡ ದಿನ"ವನ್ನು, ಕಡ್ಡಾಯವಾಗಿ ಆಚರಿಸಿ, ಪೊಲೀಸ್ ಸಿಬ್ಬಂದಿ ಕುಂದುಕೊರತೆ ಆಲಿಕೆ ಸಭೆ ನಿಯಮಿತವಾಗಿ ನಡೆಸುವಂತೆ, ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಿಗೆ, ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ ಎಂದು, ಗೃಹ ಖಾತೆ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ಪರಿಶಿ ್ಟ ಜಾತಿ ಹಾಗೂ ಪರಿಶಿ ್ಟ ಪಂಗಡ ಸಮುದಾಯದ, ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯ, ಸೇವಾ ಸಂಬಂಧಿ ಸಮಸ್ಯೆ, ಕುಂದುಕೊರತೆ ಹಾಗೂ ಕಲ್ಯಾಣಕ್ಕೆ ಸಂಬಂಧಿಸಿದ ವಿ ‘ಯಗಳಿಗೆ, ಆದ್ಯತೆ ನೀಡುವಂತೆ, ಅವರು ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರಿಗೆ, ಸೂಚಿಸಿದ್ದಾರೆ. ಪ್ರತಿ ಸಭೆಯಲ್ಲಿ ಸ್ವೀಕರಿಸಲಾದ ಮನವಿ, ದೂರುಗಳು ಹಾಗೂ ಅವುಗಳ ಕುರಿತು ಕೈಗೊಂಡ ಕ್ರಮಗಳ ವಿವರಗಳನ್ನು ದಾಖಲಿಸಿ, ನಿರ್ವಹಿಸಬೇಕು. ತಕ್ಷಣವೇ ಪರಿಹರಿಸಬಹುದಾದ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಬೇಕು. ಸರ್ಕಾರದ ಅಥವಾ ನೀತಿ ಮಟ್ಟದ ನಿರ್ಧಾರ ಅಗತ್ಯವಿರುವ ವಿ ‘ಯಗಳನ್ನು, ವಿಳಂಬವಿಲ್ಲದೆ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸು ಮಾಡಬೇಕು ಎಂದು, ನಿರ್ದೇಶನ ನೀಡಿದ್ದಾಗಿ, ಸಚಿವ ಖರ್ಗೆ ಹೇಳಿದ್ದಾರೆ.

<><><>

ಇಂದು, ವಿಶ್ವ ಕಾಗದ ಕೈಚೀಲ ಬಳಕೆ, ಜನ ಜಾಗೃತಿ ದಿನ. 'ಪ್ಲಾಸ್ಟಿಕ್ ಕೈಚೀಲ ಬೇಡ ಎನ್ನೋಣ, ಕಾಗದ ಕೈಚೀಲ ಬಳಕೆ ಖಾತ್ರಿ ಪಡಿಸೋಣ' ಎಂಬ ಧ್ಯೇಯದೊಂದಿಗೆ, ಏಕ ಬಳಕೆ ಪ್ಲಾಸ್ಟಿಕ್ ಮಿತಗೊಳಿಸಿ, ಮರುಬಳಕೆ ಮಾಡಿ, ಹಾಗೂ ಭೂಮಿಯನ್ನು ಉಳಿಸಿ ಎಂಬ, ಆಶಯದೊಂದಿಗೆ, ವಿಶ್ವ ಕಾಗದ ಕೈಚೀಲ ದಿನ ಆಚರಿಸಲಾಗುತ್ತಿದೆ. ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು ಮಂಗೇನಕೊಪ್ಪದ, ಜಾಗೃತಿ ಸಂಸ್ಥೆಯ ವಿಶ್ವಸ್ಥರಾದ, ಶಾರದಾ ಗೋಪಾಲ ದಾಬಡೆ, ಏಕ–ಬಳಕೆಯ ಪ್ಲಾಸ್ಟಿಕ್ ಮಾಲಿನ್ಯದ, ಪರಿಸರ ಅಪಾಯಗಳ ಬಗ್ಗೆ ಜಾಗೃತಿ ಮತ್ತು ಜೈವಿಕ ವಿಘಟನೀಯ, ಮರುಬಳಕೆ ಮಾಡಬಹುದಾದ, ಪರಿಸರ ಸ್ನೇಹಿ ಕಾಗದ ಮತ್ತು ಬಟ್ಟೆ ಕೈಚೀಲಗಳ ಬಳಕೆಯನ್ನು, ಪರ್ಯಾಯವಾಗಿ ಉತ್ತೇಜಿಸಲು, ಶ್ರಮಿಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಶಾರದಾ ಗೋಪಾಲ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶಾರದಾ ಗೋಪಾಲ ಧ್ವನಿ 60 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮತದಾರರ ಪಟ್ಟಿಯ, ಪರಿಷ್ಕರಣೆ ಪ್ರಕ್ರಿಯೆಯನ್ನು, ಇನ್ನಷ್ಟು ಪರಿಣಾಮಕಾರಿಯಾಗಿಸಲು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಅವಳಿ ನಗರದ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಮತಗಟ್ಟೆಗಳಲ್ಲಿ, ನಿನ್ನೆ ಹಾಗೂ ಇಂದು 'ಮತದಾರರ ಪಟ್ಟಿ ಪರಿಷ್ಕರಣೆ' ವಿಶೇಷ ಅಭಿಯಾನ ಆಯೋಜಿಸಿದೆ. ಮಹಾನಗರ ಪಾಲಿಕೆ ಆಯುಕ್ತ ರುದ್ರೇಶ ಘಾಳಿ, ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿ, ಸಾರ್ವಜನಿಕರಲ್ಲಿ S-I-R ಪ್ರಕ್ರಿಯೆಯ ಮಹತ್ವದ ಕುರಿತು, ಜಾಗೃತಿ ಮೂಡಿಸಲಿದ್ದಾರೆ.

<><><>

ಲೋಕ್ ಅದಾಲತ್ ಹಿನ್ನೆಲೆ, ರಾಜಿ ಸಂಧಾನದಲ್ಲಿ, ಧಾರವಾಡದ, ಕೌಟುಂಬಿಕ ನ್ಯಾಯಾಲಯದಲ್ಲಿ, 55 ಪ್ರಕರಣಗಳು ಇತ್ಯರ್ಥಗೊಂಡವು. 15 ದಂಪತಿಗಳು, ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಪುನರ್ಮಿಲನಗೊಂಡು, ಮತ್ತೆ ಒಂದಾಗಿ ಜೀವನ ನಡೆಸಲು, ನಿರ್ಧರಿಸಿದ್ದು ವಿಶೇಷ. ಪ್ರಧಾನ ಜಿಲ್ಲಾ ನ್ಯಾಯಾಧೀಶ ಎನ್.ವಿ.ವಿಜಯ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಕೆಲವು ದಂಪತಿಗಳು, 5, 10 ಹಾಗೂ 16 ವರ್ಷಗಳಿಂದ, ಬೇರೆ ಬೇರೆ ವಾಸಿಸುತ್ತಿದ್ದರೆ, ಒಂದು ಪ್ರಕರಣದಲ್ಲಿ, ಕೇವಲ ಮೂರು ತಿಂಗಳಲ್ಲಿ, ದೂರವಾಗಿದ್ದ ದಂಪತಿಯೂ ಪುನರ್ಮಿಲನಗೊಂಡಿದ್ದಾರೆ ಎಂದು, ಸಂತಸ ವ್ಯಕ್ತ ಪಡಿಸಿದರು.

<><><>

'ಮಲ್ಲಕಂಬ ಫೆಡರೇಷನ್ ಆಫ್ ಇಂಡಿಯಾ', ರಾಜ್ಯ ಮಟ್ಟದ, ಎರಡು ದಿನಗಳ, ಮಲ್ಲಕಂಬ ಸ್ಪರ್ಧೆಯನ್ನು,ಬೆಂಗಳೂರಿನ ಜೆ.ಪಿ. ನಗರದ, ಶ್ರೀ ದುರ್ಗಾಪರಮೇಶ್ವರಿ ಮೈದಾನದಲ್ಲಿ, ಆಯೋಜಿತವಾಗಿದ್ದು, ಇಂದು ಸಮಾರೋಪಗೊಳ್ಳಲಿದೆ. 14 ವರ್ಷದೊಳಗಿನ ಹಾಗೂ 14 ವರ್ಷ ಮೇಲ್ಪಟ್ಟ ಬಾಲಕ ಹಾಗೂ ಬಾಲಕಿಯರ, ಕಂಬ ಹಾಗೂ ಹಗ್ಗದ ಮಲ್ಲಕಂಬ ಸ್ಪರ್ಧೆಗಳು, ವಯಕ್ತಿಕ ಹಾಗೂ ಗುಂಪು ವಿಭಾಗಗಳಲ್ಲಿ ನಡೆಯುತ್ತಿವೆ. ಖೇಲೋ ಇಂಡಿಯಾ; ಫಿಟ್ ಇಂಡಿಯಾ ಆಶಯದೊಂದಿಗೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಾರಥ್ಯದಲ್ಲಿ, ಗ್ರಾಮೀಣ ಸೊಗಡಿನ, ಮಲ್ಲಕಂಬ ಸ್ಪರ್ಧೆ ಆಯೋಜಿತವಾಗಿದ್ದು, ಗದಗ ಜಿಲ್ಲೆ, ಲಕ್ಷ್ಮೇಶ್ವರದ ಖ್ಯಾತ ಮಲ್ಲಕಂಬ ತರಬೇತುದಾರ, ಅಗಡಿ ಇಂಜಿನಿಯರಿಂಗ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ, ಸೋಮಶೇಖರ ಕೊಡ್ಲಿ, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಸೋಮಶೇಖರ ಕೊಡ್ಲಿ ಧ್ವನಿ 60 ಸೆಕೆಂದುಗಳು

<><><>

ಸಂಕ್ಷಿಪ್ತ ಸುದ್ದಿಗಳು:

<><><>

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ನಬಾರ್ಡ್, ತನ್ನ 45ನೇ ಸಂಸ್ಥಾಪನಾ ದಿನವನ್ನು, ಇಂದು ಆಚರಿಸುತ್ತಿದೆ. ಗ್ರಾಮೀಣ ಸಮೃದ್ಧಿಯನ್ನು ಹೆಚ್ಚಿಸಿದ, ದಶಕಗಳ ಪ್ರಗತಿ ಪ್ರತಿಬಿಂಬಿಸುವ, ಮತ್ತು ಭಾರತದ ಕೃಷಿ ಮತ್ತು ಸಹಕಾರಿ ಕ್ಷೇತ್ರಗಳಿಗೆ, ಹೊಸ ಹಣಕಾಸು ಮತ್ತು ತಾಂತ್ರಿಕ ಉಪಕ್ರಮಗಳನ್ನು ಪ್ರಾರಂಭಿಸಿ, ಈ ವಾರ್ಷಿಕ ಮೈಲಿಗಲ್ಲನ್ನು, ನಬಾರ್ಡ್ ಸಂಭ್ರಮಿಸಲಿದೆ.

<><><>

ಇ–ಪೋತಿ, ನೋಂದಣಿ, ಮುಂದ್ರಾಂಕ ಹಾಗೂ ಹಕ್ಕುಪತ್ರ ಒದಗಿಸುವ ಕೆಲಸದ, ವೇಗ ವರ್ಧಿಸಲು, ಇಂದು, ಭಾನುವಾರ ರಾಜ್ಯದ ಎಲ್ಲ ಉಪ ನೋಂದಣಾಧಿಕಾರಿ ಕಚೇರಿಗಳು, ಕಾರ್ಯನಿರ್ವಹಿಸಲಿವೆ ಎಂದು, ಕಂದಾಯ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ ತಿಳಿಸಿದ್ದಾರೆ.

<><><>

ಡಾಕ್ಟರ್ ಜಿ.ಮಾದೇಗೌಡ, ಸಮಾಜ ಸೇವಾ ಪ್ರಶಸ್ತಿಯನ್ನು, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ, ಶರಣಪ್ಪ ಸಲಾದಪುರ ಅವರಿಗೆ, ಮಂಡ್ಯದಲ್ಲಿ ಪ್ರದಾನಿಸಿ, ಗೌರವಿಸಿದರು.

<><><>

ಮುತ್ಸದ್ದಿ, ದಿವಂಗತ, ಎಂ.ಪಿ.ಪ್ರಕಾಶ ಅವರ 86ನೇ ಜನ್ಮದಿನದ ಸ್ಮರಣಾರ್ಥ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಜಯನಗರ ಜಿಲ್ಲೆ, ಹೂವಿನ ಹಡಗಲಿಯ, ರಂಗ ಭಾರತಿ ರಂಗ ಮಂದಿರದಲ್ಲಿ, ಕಂಚಿನ ಪುತ್ಥಳಿ ಅನಾವರಣಗೊಳಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಖ್ಯಾತ, ಬಹುಭಾಷೆಗಳ ಹಿನ್ನೆಲೆ ಗಾಯಕಿ, ಎಸ್. ಜಾನಕಿ ಮೈಸೂರಿನಲ್ಲಿ ನಿಧನ.
- ರಾಜ್ಯದ ಪೊಲೀಸ್ ಠಾಣೆಗಳಲ್ಲಿ, ಪ್ರತಿ ತಿಂಗಳ, ಎರಡನೇ ಭಾನುವಾರ, "ಪರಿಶಿ ್ಟ ಜಾತಿ ಹಾಗೂ ಪರಿಶಿ ್ಟ ಪಂಗಡ ಸಿಬ್ಬಂದಿ, ದಿನ".
- ಖೇಲೋ ಇಂಡಿಯಾ; ಫಿಟ್ ಇಂಡಿಯಾ; ರಾಜ್ಯ ಮಟ್ಟದ, ಮಲ್ಲಕಂಬ ಸ್ಪರ್ಧೆ, ಬೆಂಗಳೂರಿನಲ್ಲಿ, ಇಂದು ಸಮಾರೋಪ.
- ಇಂದು, ವಿಶ್ವ ಕಾಗದ ಕೈಚೀಲ ಬಳಕೆ, ಜನ ಜಾಗೃತಿ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>